ಸ್ವಾಮಿ ವಿವೇಕಾನಂದರು ನೈತಿಕ ಆದರ್ಶವಾಗಿ ಮಾನವನ ಸುಪ್ತದೈವಿಕತೆಯನ್ನೇ ಇಟ್ಟುಕೊಂಡು, ಅದನ್ನು ಅಭಿವ್ಯಕ್ತಗೊಳಿಸುವುದೇ ನೈತಿಕತೆ ಎಂದರು. ಸಾಂಪ್ರದಾಯಿಕ ಆತ್ಮಸಿದ್ಧಾಂತವನ್ನು ಸಾಮಾಜಿಕ ಪರಿವರ್ತನೆಯ ಅಸ್ತ್ರವನ್ನಾಗಿಸಿದರು. ಸ್ವಾರ್ಥದಿಂದ ಕೂಡಿರುವುದು ಅನೈತಿಕತೆ, ನಿಸ್ವಾರ್ಥವೇ ನೈತಿಕತೆ ಎಂಬುದು ಅವರ ಸೂತ್ರ. ನೀತಿಶಾಸ್ತ್ರವೇ ಏಕತೆಗೆ ಸಂಬಂಧಪಟ್ಟದ್ದು; ಅದರ ಅಡಿಪಾಯವೇ ಪ್ರೀತಿ. ಏಕತೆಯ ಹೊರಸೂಸುವಿಕೆಯನ್ನೇ ನಾವು ಪ್ರೀತಿ, ಸಹಾನುಭೂತಿ ಇತ್ಯಾದಿಯಾಗಿ ಕರೆಯುವುದು. ಇದೇ ನಮ್ಮ ನೀತಿಗೆ ಮತ್ತು ಧರ್ಮಕ್ಕೆಲ್ಲ ಮೂಲ. **ತತ್ ತ್ವಂ ಅಸಿ** ಎಂಬ ವೇದಾಂತದ ಅತಿ ಮುಖ್ಯವಾದ ವಾಕ್ಯದಲ್ಲಿ ಇದನ್ನು ಸಂಗ್ರಹಿಸಿ ಹೇಳಿದ್ದಾರೆ ಎನ್ನುತ್ತಾರೆ ಅವರು. ಇದು ಬರಿ ವೇದಾಂತವಾಗಿ ಉಳಿಯದೆ, ಸೇವಾರೂಪದಲ್ಲಿ ಹೊರತೋರಿದಾಗ ಮಾತ್ರ ಇದಕ್ಕೆ ಬೆಲೆ. ಹೀಗಾಗಿಯೆ ಸ್ವಾಮಿಜಿ ಭಾರತದಲ್ಲಿ ಸೇವಾಕಾರ್ಯಗಳಿಗೆ ಒತ್ತು ಕೊಟ್ಟು, 'ಶಿವಜ್ಞಾನೇ ಜೀವಸೇವಾ' ಎಂಬ ತತ್ತ್ವವನ್ನು ರೂಢಿಗೆ ತಂದರು. ಹೀಗೆ, ಪ್ರಾಯೋಗಿಕವಾಗಿ ಸೇವೆಯಿಂದ ಕೂಡ ವ್ಯಕ್ತಿಯ ನೈತಿಕ ಜೀವನ ರೂಪ ಪಡೆಯುತ್ತದೆ.

ಕಷ್ಟಕ್ಕೆ ಸಿಲುಕಿದ ವಿದ್ಯಾರ್ಥಿಯೊಬ್ಬನನ್ನು ಇಡೀ ತರಗತಿ ತನು–ಮನ–ಧನಗಳಿಂದ ಬೆಂಬಲಿಸಿ, ಧನ್ಯತಾಭಾವವನ್ನು ಅನುಭವಿಸಿದ್ದನ್ನು ನೋಡಿದ್ದೇನೆ. ಎಲ್ಲರಲ್ಲಿ ಸಹಪಾಠಿಯ ಪಾಡಿನ ಬಗ್ಗೆ ಅನುಕಂಪ; ಅವರಲ್ಲಿ ಏಕತೆ ಮೂಡಿ, ಒಂದು ಗುರಿಗಾಗಿ ತಾವೆಲ್ಲ ಒಟ್ಟಾಗಿ ಪ್ರಯತ್ನಿಸುತ್ತಿದ್ದೇವೆ, ಇದರಿಂದ, ತಮ್ಮ ಜೀವನ ಹೊಸ ಅರ್ಥ ಪಡೆದುಕೊಂಡಿದೆ ಎಂದು ಅನ್ನಿಸಿತ್ತು. ತರಗತಿಯಲ್ಲಿನ ಇರುವಿಕೆ ಬೇಸರ ತರಿಸದೆ, ಚೈತನ್ಯದಾಯಕ ಅನ್ನಿಸಿತು.

ಎಳೆಯರಿಗೆ ದೇಹಭಾಷೆ ಅರ್ಥವಾಗುತ್ತದೆ; ಆದರೆ ನಮ್ಮ ಮಾತುಗಳು ಪೂರ್ತಿಯಾಗಿ ಅರ್ಥವಾಗುವುದಿಲ್ಲ. ಅವರಿಗೆ ಏನನ್ನಾದರೂ ಮಾಡಲು ಹೇಳಿ ಮಾಡಿಸಬಹುದು. ಸ್ವಲ್ಪ ವರ್ಷಗಳ ಹಿಂದೆ ಹಿರಿಯರ ಬಲವಂತಕ್ಕೆ ನಿತ್ಯಕರ್ಮಗಳು, ಸ್ತೋತ್ರಪಾಠ, ದೇವರಿಗೆ ನಮಿಸುವುದು, ಮುಖ್ಯವಾಗಿ ಮನೆಗೆಲಸದಲ್ಲಿ ಸಣ್ಣಪುಟ್ಟ ಕೆಲಸ ಮಾಡಿಕೊಟ್ಟು ಸಹಾಯ ಮಾಡುವುದು, ಗುರುಹಿರಿಯರ ಸೇವೆ ಇವುಗಳನ್ನು ಎಲ್ಲ ಮಕ್ಕಳೂ ಮಾಡಲೇಬೇಕಿತ್ತು. ಇದರಿಂದ ತಾವೂ ಎಲ್ಲರೊಳಗೆ ಒಂದು ಎಂಬ ಭಾವ ಬರುತ್ತಿತ್ತು. ಈಗ ತಂದೆ, ತಾಯಿ, ಒಂದು ಮಗು ಇರುವ ಪುಟ್ಟ ಸಂಸಾರದಲ್ಲಿ ಮಗುವಿನ ಕರ್ತವ್ಯ ಕೇವಲ ಓದುವುದು ಮಾತ್ರ ಆಗಿದ್ದು, ಎಲ್ಲರ ಮುದ್ದಿನಲ್ಲಿ ಏನೂ ಕೆಲಸ ಮಾಡಿಸದೆ, ಮನೆಯವರಿರುವುದು ತನ್ನ ಸೇವೆ ಮಾಡಲು ಎಂಬ ಭಾವದಲ್ಲಿ ಮಗುವಿನಲ್ಲಿ ಬೆಳೆಯುತ್ತದೆ. ನಮ್ಮಲ್ಲಿ ಧರ್ಮ ಅಥವಾ ನೈತಿಕತೆಯ ಮೂಲ ಮನೋನಿಯಂತ್ರಣವಾಗಿದ್ದು, ಸ್ವೇಚ್ಛೆಯಿಂದ ಬೆಳೆಯಲು ಬಿಟ್ಟ ಮಗು ಯಾವುದನ್ನೂ ಗಮನಿಸದ, ಗೌರವಿಸದ ಮನಸ್ಥಿತಿಯಲ್ಲಿ ಇರುತ್ತದೆ. ಮನೆಯಲ್ಲಿ ಇತರ ಮಕ್ಕಳಿದ್ದರೆ ಹಂಚಿಕೊಂಡು ತಿನ್ನುವುದು, ಆಡುವುದು ಗೊತ್ತಿರುತ್ತಿತ್ತು; ತಾಯಿಯ ಪ್ರೀತಿ ಕಡಿಮೆಯಾಗುವುದೆಂದು ತನ್ನ ಸ್ವೇಚ್ಛಾಪ್ರವೃತ್ತಿಗೆ ಕಡಿವಾಣ ಹಾಕಿಕೊಳ್ಳುತ್ತಿತ್ತು.

ಇಂತಹ ಮಕ್ಕಳೇ ಇರುವ ನಮ್ಮ ಶಾಲೆಯಲ್ಲಿ ಮಾಡಿದ ಪ್ರಯೋಗವೊಂದು ಹೀಗಿದೆ: ಮೊದಲ ವರ್ಷ ಸರಸ್ವತೀ ಸ್ತುತಿ ಹೇಳಿಸಿದಾಗ ಮೊದಲ ಪೀರಿಯಡ್ಡಿನಲ್ಲಿ ಏಕಾಗ್ರತೆ ಹೆಚ್ಚಿತ್ತು. ಅನಂತರ ಈ ವರ್ಷ ಶಾಲೆಯ ಆರಂಭದಲ್ಲಿ ಹಾಗೂ ಕೊನೆಯಲ್ಲಿ ಹತ್ತು ನಿಮಿಷ ಓಂಕಾರ ಧ್ಯಾನ ಮಾಡಿಸಿದಾಗ ಇಡೀದಿನ ಗಲಾಟೆ ಇಲ್ಲದೆ ಪಾಠ ಕೇಳಲಾರಂಭಿಸಿದರು. ಉತ್ಸಾಹಿತರಾದ ಅಧ್ಯಾಪಕರು ಸರಳ ಮಂತ್ರಗಳು, ಸ್ತೋತ್ರಗಳನ್ನು ಹೇಳಿಸಿ ಪಾಠ ಆರಂಭಿಸುತ್ತಿದ್ದಾರೆ; ಮಕ್ಕಳು ಓದಿನಲ್ಲಿ ತೊಡಗಿಸಿಕೊಳ್ಳುವಿಕೆ ಹೆಚ್ಚಿದೆ. ಮಾತಿಗಿಂತ ಕೃತಿ ಮೇಲು ಎಂಬುದು ಅನುಭವಕ್ಕೆ ಬಂತು. ಇನ್ನೊಂದು ಪ್ರಯೋಗ ಕೈಬರಹದ್ದು. ಉತ್ಸಾಹೀ ಹಿರಿಯರೊಬ್ಬರು ಒಂಬತ್ತು ಹಾಗೂ ಹತ್ತನೆ ತರಗತಿಯ ಎಲ್ಲ ಲೆಕ್ಕಗಳನ್ನು ಬಿಡಿಸಿ ಕಂಪ್ಯೂಟರ್‌ಗೆ ಹಾಕಿದ್ದರು. ಅದನ್ನು ಧ್ವನಿಯೊಡನೆ ಪರದೆಯ ಮೇಲೆ ತೋರಿಸಿದಾಗ, ಮಕ್ಕಳು ಅಷ್ಟಾಗಿ ಗಮನ ನೀಡದೆ, ಕಲಿಯಲಿಲ್ಲ. ಅವೇ ಲೆಕ್ಕಗಳನ್ನು ಕೈಬರಹದಲ್ಲಿ, ಕ್ರಮವಾದ ಹಂತಗಳಲ್ಲಿ ಪರದೆಯ ಮೇಲೆ ತೋರಿಸುವಾಗ, ಅಧ್ಯಾಪಕರೇ ಅವನ್ನು ಬಿಡಿಸುತ್ತಿದ್ದಾರೆ ಎಂಬ ಭಾವನೆ ಅವರಲ್ಲಿ ಬಂದಿತು! ಅವರು ಧ್ಯಾನದ ಅನುಭವಕ್ಕೆ, ಕೈಬರಹಕ್ಕೆ ಹೊಂದಿಕೊಳ್ಳುತ್ತ ಹೋದುದನ್ನು ಯಾವ ತರ್ಕದಿಂದ ವಿವರಿಸಬಹುದು? ಅನುಭವ ತರ್ಕಾತೀತ.

ನಾನು ಗುಂಪಿಗೆ ಸೇರಿದವನು ಎಂಬ ಭಾವ (sense of belonging) ಮಗುವಿನಲ್ಲಿ ಮೂಡುವುದು ಮುಖ್ಯ. ಸುಭದ್ರತೆಯ ಭಾವನೆ ಇದರಿಂದ ಉಗಮವಾಗುತ್ತದೆ. ಮುಗ್ಧಮನಸ್ಸಿನ ಅಖಂಡತೆಯಿಂದಾಗಿ ಮಗುವಿನ ಕಲಿಕೆಯ ಸಾಮರ್ಥ್ಯವು ಅಸಾಧಾರಣವಾಗಿರುತ್ತದೆ; ಇನ್ನೊಬ್ಬರಿಂದ ಮುಚ್ಚಿಟ್ಟುಕೊಳ್ಳುವುದೇನೂ ಇರದ್ದರಿಂದ ಭಾವನೆಗಳೂ ತೀವ್ರವಾಗಿರುತ್ತವೆ. ಇಂದಿನ ಶಿಕ್ಷಣವು ಅಖಂಡವಾದುದನ್ನು ಮುರಿದು ಭಾಗಗಳಾಗಿ ವಿಂಗಡಿಸಿ ಮತ್ತೆ ಜೋಡಿಸುವ ಆಟವಾಗಿದೆ. ತನಗೆ ಸುಳ್ಳು ವ್ಯಕ್ತಿತ್ವವನ್ನು ಕಲ್ಪಿಸಿಕೊಳ್ಳುವ ಮೂಲಕ ಮಗು ಆ ವ್ಯಕ್ತಿತ್ವವನ್ನು ನಿರಂತರ ಪೋಷಿಸಬೇಕಾದ ಒತ್ತಡಕ್ಕೆ ಸಿಲುಕುತ್ತದೆ. ಹೀಗಾಗಿ ಸಹಜವಾಗಿ ಮಕ್ಕಳಲ್ಲಿರುವ ನೈತಿಕತೆಗೂ, ಸುತ್ತ ಇರುವ ಹಿರಿಯರ ನೈತಿಕತೆಗೂ ವ್ಯತ್ಯಾಸ ಇದ್ದು, ತರ್ಕ, ಇಚ್ಛಾಶಕ್ತಿ ಬೇಕಾಗುವ ಈ ಸಾಮಾಜಿಕ ನೈತಿಕತೆಯನ್ನು ಮಕ್ಕಳಿಗೆ ಕಲಿಸುವುದು ಕಷ್ಟ. ನೈತಿಕತೆಯ ಮುಖವಾಡವನ್ನು ಅವರು ವಿರೋಧಿಸುತ್ತಾರೆ; ಬಲವಂತವಾಗಿ ಹೇರಿದರೆ, ಗಲಿಬಿಲಿಗೊಳ್ಳುತ್ತಾರೆ. ಸ್ವಾಮಿ ವಿವೇಕಾನಂದರು ಹೇಳುವ ನೈತಿಕತೆ ಆತ್ಮನ ಪರಿಶುದ್ಧತೆಯ ಮೇಲೆ, ಸುಪ್ತ ದೈವಿಕತೆಯ ಮೇಲೆ ಆಧಾರಿತವಾಗಿದ್ದು, ಯಾವುದೇ ಒತ್ತಾಯ, ನಿರ್ಬಂಧಗಳಿಂದ ದೂರವಾಗಿದೆ. ಸಹಜವಾಗಿ ಇರುವ ಇಂತಹ ನೈತಿಕತೆ ಸರ್ವತ್ರ ಮಾನ್ಯವಾಗಬೇಕಿದೆ.